ಚಿತ್ತ ಕೆತ್ತಿದ ಚಿತ್ರ

# ಗಂಡನ ಮದುವೆಗೆ ಉಪ್ಪಿನಕಾಯಿ ಹಾಕಿದವಳು

## 'ಮರಳಿ ಮಣ್ಣಿಗೆ' ಕೃತಿಯ ಪಾರೋತಿ



**ಜಯಶ್ರೀ ಕದ್ರಿ**

ಕಲೆ: ಅಕ್ಷಯ ಹೆಗಡೆ ಜಾಲಿಮನೆ

ಕಥೆಯ ಪಾತ್ರವೊಂದು ನಮ್ಮ ಅಂತರಂಗವನ್ನು ಕಲಕಿ ನಮ್ಮದೇ ಭಾವ ಕೋಶದ ಭಾಗವಾಗುವುದು, ನಮ್ಮ ಮನೋವ್ಯಾಪಾರಗಳಿಗೂ ಪಾತ್ರಗಳ ಚಟುವಟಿಕೆಗಳಿಗೂ ತಾಳೆಯಾಗುವುದನ್ನು ಒಂದು ವಿಸ್ಮಯದಿಂದ ಗಮನಿಸುವುದು, ಓದಿನ ಸುಖ ಎಂದೇ ಹೇಳಬಹುದು. ಇನ್ನು ಕಥೆ ಕಾದಂಬರಿಗಳಲ್ಲಿ ಚಿತ್ರಿತವಾಗುವ ಬುದ್ಧಿಭಾವಗಳ ಸಂಘರ್ಷ, ಸಮಾಜ, ವ್ಯಕ್ತಿ ಜೀವನ, ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಘರ್ಷ ಒಂದಲ್ಲ ಒಂದು ವಿಧದಲ್ಲಿ ನಮ್ಮ ಅನುಭವಗಳು ಕೂಡ. ಹಾಗೆ ನೋಡುವುದಿದ್ದರೆ ಪ್ರತಿಯೊಬ್ಬರ ಅನುಭವವೂ ಎಷ್ಟು ವೈಯಕ್ತಿಕವೋ ಅಷ್ಟೇ ಸಾರ್ವತ್ರಿಕ ಪ್ರಜ್ಞೆಯ ಭಾಗ ಕೂಡ. ಕಳೆದು ಹೋದ ಒಂದು ಕಾಲಘಟ್ಟದ ವ್ಯಕ್ತಿಗಳ ಬಾಳ್ವೆ ನಮ್ಮ ಬಾಳಿನ ಸಂಕಥನದಂತೆ ಗೋಚರಿಸುವುದು, ಒಂದು ಕಾದಂಬರಿಯ ಗೃಹಿಣಿಯೋ, ಅಜ್ಜನೋ ನಮ್ಮ ಮನೆಯ ಹಿರಿಯರಂತೆ ಭಾಸವಾಗುವುದಲ್ಲಿ ಅಚ್ಚರಿ ಪಡಬೇಕಿಲ್ಲ. ಜಗತ್ತನ್ನು ವ್ಯಾಪಿಸಿರುವ ವಿಶ್ವ ಚೈತನ್ಯದ ಭಾಗದಂತೆ, ಸಮಷ್ಟಿಯ ಆಲೋಚನೆಯ ತರಂಗಗಳು ನಮ್ಮನ್ನೆಲ್ಲೋ ತಾಕಿದಂತೆ, ಶ್ರೇಷ್ಠ ಕೃತಿಗಳು ನಮ್ಮ ಅಂತರಂಗವನ್ನು ಪ್ರಭಾವಿಸುತ್ತವೆ, ಆಲೋಚನೆಗೆ ಹಚ್ಚುತ್ತವೆ, ಬಾಳಿನ ಸತ್ಯಗಳನ್ನು ತಿಳಿದುಕೊಳ್ಳಲು, ಮಾನವೀಯ ಪ್ರಜ್ಞೆ ಬೆಳೆಸಿಕೊಳ್ಳಲು ಸಹಾಯವಾಗುತ್ತವೆ. ಕೆಲವು ಪಾತ್ರಗಳಂತೂ ನಮ್ಮನ್ನು ಅನುದಿನ ಕಾಡಿ ಹೃದಯ ಭಾರವಾಗಿಸುತ್ತವೆ. ಟಾಲ್‌ಸ್ಟಾಯ್ ಬರೆದಿರುವ ಮಹತ್ವದ ಕೃತಿ 'ಅನ್ನಾ ಕರೇನಿನ', ಕುವೆಂಪು ಅವರ 'ಕಾನೂರು ಹೆಗ್ಗಡತಿ', ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯ ಪಾರೋತಿ...ಹೀಗೆ.

ಕಾರಂತರ 'ಮರಳಿ ಮಣ್ಣಿಗೆ'ಯ ಪಾರೋತಿ (ಪಾರ್ವತಿ) ದಮನಿತ ಹೆಣ್ಣುಕುಲವನ್ನು ಪ್ರತಿನಿಧಿಸುವಂತೆ ತೋರುತ್ತದೆ. ಅದು ಸದಾ ನನ್ನನ್ನು ಕಾಡುವ ಪಾತ್ರ. ಪಾರೋತಿಯಂತಹ ನಿಷ್ಪಾಪಿ ಜೀವಗಳು ನಾನು ಹುಟ್ಟಿ ಬೆಳೆದ ಪರಿಸರದಲ್ಲಿಯೂ ಕಾಣಲು ಸಿಗುತ್ತಾರೆ. ಆ ಅಮಾಯಕ ಹೆಣ್ಣು ಜೀವಗಳು ತಮ್ಮದಲ್ಲದ ತಪ್ಪಿಗೆ ಅನುಭವಿಸಿದ ಯಾತನೆ, ತಮ್ಮ ಸಂಸಾರದ 'ಮರ್ಯಾದೆ' ಉಳಿಸಿಕೊಳ್ಳಲು ಅವರು ಪಟ್ಟ ಪಡಿಪಾಟಲು ಇವುಗಳನ್ನೆಲ್ಲ ಕಣ್ಣಾರೆ ನೋಡುತ್ತಾ